**ಇಂದು ದಿನಾಂಕ:** 09.02.2026 **ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ಮಾಡಿಸಲಾಯಿತು.**

**ಪಾಟೀ ಸವಾಲು : ವಾದಿ ಪರ ಶ್ರೀ.ಜಿ.ಸಿ.ಜಿ.ವಕೀಲರಿಂದಃ**

ನಾನು ಸಾಕ್ಷ್ಯ ಹೇಳಲು ಬಂದಿರುವ ಪ್ರಕರಣದ ಸಂಖ್ಯೆ ಗೊತ್ತಿಲ್ಲ. ಮಲ್ಲೇಶರವರು ಕಾಳಮರಿಯವರ ವಿರುದ್ಧ ಕೇಸು ಹಾಕಿದ್ದಾರೆ. ಏನು ಪರಿಹಾರ ಕೋರಿ ಕೇಸು ಹಾಕಿದ್ದಾರೆ ಎಂದು ಗೊತ್ತಿಲ್ಲ. ಮಲ್ಲೇಶರವರು ದಾವಾ ಆಸ್ತಿಯ ಸ.ನಂ.39 ಮತ್ತು 35 ಕ್ಕೆ ಕೇಸು ಹಾಕಿದ್ದಾರೆ. ನಾಂಕ 25.08.1955 ರಂದು ಹೆಚ್.ಎಂ.ಕರಿಯಪ್ಪ ಅಲಿಯಾಸ್ ಕರೀಗೌಡರಿಗೆ ಕ್ರಯಕ್ಕೆ ಬಂದ ಸ್ವತ್ತು ಎಂದು ಪ್ರಮಾಣ ಪತ್ರದಲ್ಲಿ ಬರೆಸಿದ್ದೀರಾ ಎಂದರೆ ನೆನಪಿಲ್ಲ.

ಪ್ರಮಾಣ ಪತ್ರದಲ್ಲಿ ಬರೆಸಿರುವ ವಿಷಯಗಳು ಸ್ವಲ್ಪ ಗೊತ್ತಿದೆ ಸ್ವಲ್ಪ ನೆನಪಿಲ್ಲ. ದಾವಾ ಆಸ್ತಿಗಳ ಮೂಲ ದಾಖಲೆಗಳನ್ನು ನೋಡಿಲ್ಲ. ಕಾಳಮರಿ ಬಿನ್ ಸಣ್ಣೇಗೌಡರು ನಮ್ಮ ಗ್ರಾಮದಲ್ಲಿ ವಾಸವಿದ್ದಾರೆ ಎಂದರೆ ಸರಿ ಅವರು ಅವರ ಅತ್ತೆ ಮನೆಗೆ ಬಂದು ಸೇರಿಕೊಂಡಿದ್ದಾರೆ. ಆ ಮನೆಯ ಅಸೆಸ್ ಮೆಂಟ್ ನಂಬರ್ ಮತ್ತು ಮನೆಯ ಚೆಕ್ಕುಬಂಧಿ ಗೊತ್ತಿಲ್ಲ. ದಾವಾ ಆಸ್ತಿಗಳ ಖಾತೆ ಕರಿಯಪ್ಪ ಮತ್ತು ಮಲ್ಲೇಶರವರ ಹೆಸರಿನಲ್ಲಿದೆ. ಕರಿಯಪ್ಪನವರು ದಾವಾ ಆಸ್ತಿಗಳ ಖರೀದಿದಾರರು. ಅವರು ಒಬ್ಬ ಸಾಹುಕಾರರಿಂದ ಖರೀದಿಸಿದ್ದಾರೆ. ಖರೀದಿಸಿರುವ ದಿನಾಂಕ ಗೊತ್ತಿಲ್ಲ.

ದಾವಾ ಆಸ್ತಿಗಳು ಕಾಳಮರೀಗೌಡರಿಗೆ ಸಾಗುವಳಿ ಮೂಲಕ ಬಂದಿದೆ ಎಂದರೆ ಸರಿಯಲ್ಲ. ಕರಿಯಪ್ಪನವರ ಹೆಸರಿಗೆ ಕ್ರಯ ಪತ್ರದ ಮೂಲಕ ಬಂದಿದ್ದು, ಅವರೇ ಸ್ವಾಧೀನವಿದ್ದಾರೆ. ದಾವಾ ಆಸ್ತಿಗಳ ಚೆಕ್ಕುಬಂಧಿ ಗೊತ್ತಿಲ್ಲ. ನಮ್ಮ ಜಮೀನಿನಿಂದ ಸುಮಾರು 200 ಅಡಿ ದೂರಿನಿಂದ ದಾವಾ ಆಸ್ತಿಗಳಿವೆ. ಹೆಚ್.ಕೆ.ಮಲ್ಲೇಶರವರ ತಂದೆಯ ಹೆಸರು ಹೆಚ್.ಎಂ.ಕರಿಯಪ್ಪ ಎಂಬುದರ ಬಗ್ಗೆ ದಾಖಲೆ ನೋಡಿಲ್ಲ. ಹೆಚ್.ಎಂ.ಕರಿಯಪ್ಪ ನಮ್ಮ ಊರಿನಲ್ಲಿ ರೇಷನ್ ಖರೀದಿಸುತ್ತಿದ್ದುದು ಗೊತ್ತಿಲ್ಲ.

**DW-03**

ಹೆಚ್.ಎಂ.ಕರಿಯಪ್ಪ ಮೂಲತಃ ಭೋಗನಹಳ್ಳಿಯವರು ಎಂದರೆ ಸರಿ. ಹೆಚ್.ಎಂ.ಕರಿಯಪ್ಪರವರ ವಾರಸುದಾರರು ಈಗ ಹೊನ್ನಾಪುರ ಗ್ರಾಮದಲ್ಲಿ ವಾಸವಿದ್ದಾರೆ ಎಂದರೆ ಸರಿ. ಕರಿಯಪ್ಪ ಬಿನ್ ಮಲ್ಲೇಗೌಡರು ಮೂಲತಃ ಭೋಗನಹಳ್ಳಿ ಗ್ರಾಮದವರು ಎಂದರೆ ಸರಿ. ನಾನು ಸಾಕ್ಷ್ಯ ಹೇಳಲು ಬಂದಿರುವ ಮಲ್ಲೇಶ ಬಿನ್ ಕರೀಗೌಡ ಭೋಗನಹಳ್ಳಿ ಗ್ರಾಮದವರು ಎಂದರೆ ಸರಿಯಲ್ಲ.

ದಾವಾ ಆಸ್ತಿಗಳಲ್ಲಿ 1 ನೇ ಪ್ರತಿವಾದಿ ಸ್ವಾಧೀನವಿದ್ದಾರೆ ಎಂದರೆ ಸರಿಯಲ್ಲ. ಕಾಳಮರೀಗೌಡರು ಈ ವರ್ಷದಲ್ಲಿ ಹೊಗೆಸೊಪ್ಪು ಬೆಳೆದು ನಂತರ ರಾಗಿ ಬೆಳೆದಿದ್ದಾರೆ ಎಂದರೆ ಸುಳ್ಳು, ಹಿಂದಿನಿಂದಲೂ ಕರಿಯಪ್ಪ ಮತ್ತು ಮಲ್ಲೇಗೌಡರು ಸ್ವಾಧೀನವಿದ್ದಾರೆ. ನಮ್ಮ ಜಮೀನಿನ ಸರ್ವೆ ನಂಬರ್ 15 ರಲ್ಲಿ 1 ಎಕರೆ ಇದೆ. ಕಾಳಮರಿಗೌಡರು ಸ.ನಂ.35 ಮತ್ತು 39 ರ ಆಸ್ತಿಗಳ ಸಂಬಂಧ ವ್ಯವಸಾಯ ಸಹಕಾರ ಸೇವಾ ಬ್ಯಾಂಕ್ ನಿಂದ ಸಾಲ ತೆಗೆದುಕೊಳ್ಳುತಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿಗಳಿಗೆ ಕಾಳಮರೀಗೌಡರೆ ಮಾಲೀಕರು ಮತ್ತು ಸ್ವಾಧೀನವಿದ್ದು ಅವರ ಹೆಸರಿನಲ್ಲಿಯೇ ಆರ್.ಟಿ.ಸಿ. ಬರುತ್ತಿದ್ದರು ನಾನು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಗೆ ಅನುಕೂಲವಾಗಲೆಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯ ಹೇಳಲು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಕಾಳಮರೀಗೌಡರು ನಮ್ಮ ಗ್ರಾಮದಲ್ಲಿ ಶವ ಸಂಸ್ಕಾರ ಮಾಡಲು ಹಳ್ಳ ತೆಗೆಯುತ್ತಿದ್ದರು ಈಗ ಅವರು ಹಳ್ಳ ತೆಗೆಯುತ್ತಿಲ್ಲ ಆದ್ದರಿಂದ ಜಿದ್ದಿನಿಂದ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಕೇಸಿನ ಬಗ್ಗೆ ನನಗೇನೂ ಗೊತ್ತಿಲ್ಲದಿದ್ದರೂ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

***(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)***

***ಓ.ಹೆ.ಕೆ.ಸರಿ ಇದೆ.***

**ಹಿ.ಸಿ.ನ್ಯಾ ಮತ್ತು ಪ್ರ.ದ.ನ್ಯಾದಂ.**

**ಪಿರಿಯಾಪಟ್ಟಣ**